## ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಹಾಸನ

## ಎಸ್ ಸಿ ನಂ 203/2024

| **ಪಿರ್ಯಾದಿಃ** | ವಿರುದ್ಧ | **ಆರೋಪಿಃ** |
|---|---|---|
| ಹಾಸನ ಗ್ರಾಮಾಂತರ ಪೊಲೀಸರು | | ಕೇಶವಮೂರ್ತಿ ಹಾಗೂ ಮತ್ತೊಬ್ಬರು |

**ಶ್ರೀ ಎಸ್.ಎ ಹಿದಾಯತ್ ಉಲ್ಲಾ ಷರೀಪ್,** 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಹಾಸನ ಆದ ನಾನು ಆರೋಪಿತರಾದ

| | |
|---|---|
| 1ನೇ ಆರೋಪಿ | ಕೇಶವಮೂರ್ತಿ ಎಂ ಎಲ್ ಬಿನ್ ಲೇಟ್ ಲಕ್ಷ್ಮಣಶೆಟ್ಟಿ, 43 ವರ್ಷ, ವ್ಯವಸಾಯ |
| 2ನೇ ಆರೋಪಿ | ಮಹೇಶ ಎಲ್ ಎಂ ಬಿನ್ ಲಕ್ಷ್ಮಣಶೆಟ್ಟಿ, 36 ವರ್ಷ, ವ್ಯವಸಾಯ<br>ಇಬ್ಬರೂ ಆರೋಪಿಗಳು ಮುಗ್ಗನಹಳ್ಳಿ ಗ್ರಾಮ, ಸಾಲಗಾಮೆ ಹೋಬಳಿ, ಹಾಸನ ತಾಲ್ಲೂಕಿನ ವಾಸಿಗಳು. |

**ನಿಮ್ಮಗಳ ವಿರುದ್ಧ ಹೊರಿಸುವ ದೋಷಾರೋಪಣೆ ಏನೆಂದರೆ,**

ಮೊದಲನೆಯದಾಗಿ ದಿನಾಂಕಃ 10.05.2024 ರಂದು ಬೆಳಿಗ್ಗೆ 11 ಗಂಟೆ ಸಮಯದಲ್ಲಿ ಹಾಸನ ಗ್ರಾಮಾಂತರ ಪೊಲೀಸ್ ಠಾಣಾ ಸಹರದ್ದಿನ ಮುಗ್ಗನಹಳ್ಳಿ ಗ್ರಾಮದಲ್ಲಿರುವ ಸರ್ವೆ ನಂ.3/1ರ ಜಮೀನಿನಲ್ಲಿ ಚಾಸಾ-1 ಗೋವಿಂದಶೆಟ್ಟಿ ಹಾಗೂ ಚಾಸಾ-2 ಗೌರಮ್ಮ ರವರು ಕೆಲಸ ಮಾಡುತ್ತಿದ್ದ ಕಾಲದಲ್ಲಿ ಆರೋಪಿಗಳಾದ ನೀವು ಸದರಿ ಜಮೀನಿಗೆ ಬಂದು ಸಮಾನ ಉದ್ದೇಶದಿಂದ ಸೇರಿಕೊಂಡು ನಿಮ್ಮ ಪೈಕಿ 1ನೇ ಆರೋಪಿ

ಕೇಶವಮೂರ್ತಿ ರವರು ಚಾಸಾ–1 ಗೋವಿಂದಶೆಟ್ಟಿಯನ್ನು ತಬ್ಬಿ ಹಿಡಿದುಕೊಂಡು ಅಕ್ರಮ ತಡೆ ಉಂಟು ಮಾಡಿದ್ದು, ಆರೋಪಿ–1 ಹಾಗೂ 2 ರವರುಗಳಾದ ನೀವು ಭಾರತೀಯ ದಂಡ ಸಂಹಿತೆ ಕಲಂ.341 ಸಹಕಲಂ. 34ರ  ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೆಯಲ್ಲಿ ಮಾಡಿರುತ್ತೀರಿ.

ಎರಡನೆಯದಾಗಿ ಮೇಲೆ ಕಾಣಿಸಿದ ದಿನಾಂಕ, ಸ್ಥಳ ಹಾಗೂ ಸಮಯದಂದು ಆರೋಪಿ–1 ಹಾಗೂ 2 ಆದ ನೀವು ಸಮಾನ ಉದ್ದೇಶದಿಂದ ಸೇರಿಕೊಂಡು ಚಾಸಾ–1 ಗೋವಿಂದಶೆಟ್ಟಿ ರವರಿಗೆ "ಬೋಳಿಮಗನೆ, ಸೂಳೆಮಗನೆ, ಯಾರಪ್ಪನ ಜಮೀನು ಅಂತ ಇಲ್ಲಿ ಬಂದು ಕೆಲಸ ಮಾಡುತ್ತಿದ್ದೀಯಾ" ಎಂದು ಅವಾಚ್ಯ ಶಬ್ದಗಳಿಂದ ಬೈದು ಶಾಂತಿಭಂಗವನ್ನು ಮಾಡಲು ಉದ್ರೇಕಿಸುವುದಕ್ಕಾಗಿ ಉದ್ದೇಶಪೂರ್ವಕವಾಗಿ ಅಪಮಾನಗೊಳಿಸಿದ್ದು, ಆರೋಪಿ–1 ಹಾಗೂ 2 ರವರುಗಳಾದ ನೀವು ಭಾರತೀಯ ದಂಡ ಸಂಹಿತೆ ಕಲಂ.504 ಸಹಕಲಂ 34ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೆಯಲ್ಲಿ ಮಾಡಿರುತ್ತೀರಿ.

ಮೂರನೆಯದಾಗಿ ಮೇಲೆ ಕಾಣಿಸಿದ ದಿನಾಂಕ, ಸ್ಥಳ ಹಾಗೂ ಸಮಯದಂದು ಆರೋಪಿ–1 ಹಾಗೂ 2 ಆದ ನೀವು ಸಮಾನ ಉದ್ದೇಶದಿಂದ ಸೇರಿಕೊಂಡು ನಿಮ್ಮ ಪೈಕಿ 1ನೇ ಆರೋಪಿಯು ಚಾಸಾ–1 ಗೋವಿಂದಶೆಟ್ಟಿ ರವರನ್ನು ಕುರಿತು "ಈ ನನ್ನ ಮಗನನ್ನು ಈಗಲೇ ಮುಗಿಸಬೇಕು" ಎಂದು ಚಾಸಾ–1 ಗೋವಿಂದಶೆಟ್ಟಿ ರವರನ್ನು ಕೊಲೆ ಮಾಡುವ ಉದ್ದೇಶದಿಂದ ಅವರ ಎದೆಗೆ, ಹೊಟ್ಟೆಗೆ, ತಲೆಗೆ, ಎರಡೂ ರಟ್ಟೆಗೆ ಮುಷ್ಟಿ ಕಟ್ಟಿ ಹೊಡೆದು ಕಾಲಿನಿಂದ ಒದ್ದಿದ್ದು, ನಿಮ್ಮ ಪೈಕಿ 2ನೇ ಆರೋಪಿ ಮಹೇಶ್ ರವರು ಚಾಸಾ–1 ಗೋವಿಂದಶೆಟ್ಟಿಯನ್ನು ಕುರಿತು "ಹಂಗೆಲ್ಲಾ ಹೊಡೆದರೆ ಇವನು ಸಾಯುವುದಿಲ್ಲ ಈ ಮಗನ ಕುತ್ತಿಗೆ ಹಿಸುಕಿ ಸಾಯಿಸಬೇಕು" ಎಂದು ಕೊಲೆ ಮಾಡುವ ಉದ್ದೇಶದಿಂದ ಚಾಸಾ–1 ಗೋವಿಂದಶೆಟ್ಟಿ ರವರ ಕುತ್ತಿಗೆಯನ್ನು ಹಿಸುಕಲು ಹೋಗಿ ಅವರನ್ನು ಕೊಲೆ ಮಾಡಲು ಪ್ರಯತ್ನಿಸಿದ್ದು, ಆರೋಪಿ–1 ಹಾಗೂ 2 ರವರುಗಳಾದ ನೀವು ಭಾರತೀಯ ದಂಡ ಸಂಹಿತೆ ಕಲಂ.307 ಸಹಕಲಂ 34ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೆಯಲ್ಲಿ ಮಾಡಿರುತ್ತೀರಿ.

ನಾಲ್ಕನೆಯದಾಗಿ ಮೇಲೆ ಕಾಣಿಸಿದ ದಿನಾಂಕ, ಸ್ಥಳ ಹಾಗೂ ಸಮಯದಂದು ಆರೋಪಿ–1 ಹಾಗೂ 2 ಆದ ನೀವು ಸಮಾನ ಉದ್ದೇಶದಿಂದ ಸೇರಿಕೊಂಡು ನಿಮ್ಮ ಪೈಕಿ 2ನೇ ಆರೋಪಿ ಮಹೇಶ್ ಚಾಸಾ–1 ಗೋವಿಂದಶೆಟ್ಟಿ ರವರ ಬೆನ್ನಿಗೆ ಕೈಯಿಂದ ಮುಷ್ಟಿ ಕಟ್ಟಿ ಗುದ್ದಿ ಸ್ವಇಚ್ಛೆಯಿಂದ ನೋವುಪಡಿಸಿದ್ದು, ಆರೋಪಿ–1 ಹಾಗೂ 2 ರವರುಗಳಾದ ನೀವು ಭಾರತೀಯ

ದಂಡ ಸಂಹಿತೆ ಕಲಂ. 323 ಸಹಕಲಂ 34ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೆಯಲ್ಲಿ ಮಾಡಿರುತ್ತೀರಿ.

ಐದನೆಯದಾಗಿ ಮೇಲೆ ಕಾಣಿಸಿದ ದಿನಾಂಕ, ಸ್ಥಳ ಹಾಗೂ ಸಮಯದಂದು ಆರೋಪಿ-ಆರೋಪಿ-1 ಹಾಗೂ 2 ಆದ ನೀವು ಸಮಾನ ಉದ್ದೇಶದಿಂದ ಸೇರಿಕೊಂಡು ಜಗಳ ಬಿಡಿಸಲು ಹೋದ ಚಾಸಾ-2 ಗೌರಮ್ಮ ರವರನ್ನು ಕುರಿತು " ಅಯ್ಯೋ ಮುಂಡೆ ನೀನೂ ಬಿಡಿಸಲು ಬರುತ್ತೀಯಾ" ಎಂದು ಹಿಡಿದು ಎಳೆದಾಡಿ ಆಕೆಯ ಮಾನಭಂಗ ಮಾಡುವ ಉದ್ದೇಶದಿಂದ ಅವರ ರವಿಕೆಯನ್ನು ಹರಿದು ಹಾಕಿ ಅವಮಾನಿಸಿ ಅಪರಾಧಿಕ ಬಲಪ್ರಯೋಗ ನಡೆಸಿದ್ದು ನೀವು ನೀವು ಭಾರತೀಯ ದಂಡ ಸಂಹಿತೆ ಕಲಂ.354 ಸಹಕಲಂ 34ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೆಯಲ್ಲಿ ಮಾಡಿರುತ್ತೀರಿ.

ಆರನೆಯದಾಗಿ ಮೇಲೆ ಕಾಣಿಸಿದ ದಿನಾಂಕ, ಸ್ಥಳ ಹಾಗೂ ಸಮಯದಂದು ಆರೋಪಿ-1 ಹಾಗೂ 2 ಆದ ನೀವು ಸಮಾನ ಉದ್ದೇಶದಿಂದ ಸೇರಿಕೊಂಡು ಚಾಸಾ-1 ಗೋವಿಂದಶೆಟ್ಟಿ ರವರಿಗೆ "ಇವತ್ತು ಬದುಕಿಕೊಂಡೆ ನಿನಗೆ ಒಂದಲ್ಲ ಒಂದು ದಿನ ಗತಿ ಕಾಣಿಸದೆ ಬಿಡುವುದಿಲ್ಲ" ಎಂದು ಕೊಲೆ ಬೆದರಿಕೆ ಹಾಕಿ ಅಪರಾಧಿಕ ಭಯೋತ್ಪಾದನೆ ನಡೆಸಿ ಪ್ರಾಣಭಯ ಉಂಟು ಮಾಡಿದ್ದು, ಆರೋಪಿ-1 ಹಾಗೂ 2 ರವರುಗಳಾದ ನೀವು ಭಾರತೀಯ ದಂಡ ಸಂಹಿತೆ ಕಲಂ.506 ಸಹಕಲಂ 34ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೆಯಲ್ಲಿ ಮಾಡಿರುತ್ತೀರಿ.

ಮೇಲೆ ಹೇಳಿದ ಆರೋಪಗಳು ನನ್ನ ಸಂಜ್ಞೆಗೆ ಒಳಪಡುತ್ತವೆ ಹಾಗೂ ಆರೋಪಿತರಾದ ನೀವು ಮೇಲೆ ಹೇಳಿದ ಆರೋಪಗಳಿಗೆ ಅಧಿವಿಚಾರಣೆಗೆ ಒಳಪಡಬೇಕೆಂದು ಈ ಮೂಲಕ ಆದೇಶಿಸಲಾಗಿದೆ.

ದಿಃ- 04.04.205.

**(ಎಸ್.ಎ ಹಿದಾಯತ್ ಉಲ್ಲಾ ಷರೀಫ್)**
**2ನೇ ಅಪರ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,**
**ಹಾಸನ.**